ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂ. ಯವರ ನ್ಯಾಯಾಲಯ ,
ಕುಂದಾಪುರ

ಸಿ.ಸಿ. ನಂಬ್ರ: 1251/2021

ಚಾಸಾ: 15 ಪ್ರಾಸಾ:10

ದಿನಾಂಕ: 15.12.2025

| | | |
|---|---|---|
| ವಾಗ್ಮೂಲದವರ ಹೆಸರು | : | ಶ್ರೀ ವಿಶ್ವನಾಥ ನಾಯ್ಕ |
| ತಂದೆಯ ಹೆಸರು | : | ಮೋನಪ್ಪ ನಾಯ್ಕ |
| ವಯಸ್ಸು | : | 60 ವರ್ಷ |
| ಉದ್ಯೋಗ | : | ನಿವೃತ್ತ ಸಹಾಯಕ ಪ್ರಾದೇಶಿಕ ಸಾರಿಗೆ ಅಧಿಕಾರಿ |
| ವಾಸ ಸ್ಥಳ | : | ಬಂಟ್ವಾಳ |

ಸಾಕ್ಷಿಯನ್ನು ಪ್ರಮಾಣೀಕರಿಸಲಾಯಿತು.

**ಮುಖ್ಯ ವಿಚಾರಣೆ: ಮಾನ್ಯ ಸ.ಸ.ಅ.ರವರಿಂದ:**

ನಾನು 2012 ಸೆಪ್ಟಂಬರ್ ನಿಂದ 20-08-2022ರವರೆಗೆ ಉಡುಪಿಯ ಸಾರಿಗೆ ಪ್ರಾದೇಶಿಕ ಕಚೇರಿಯಲ್ಲಿ ಮೋಟಾರು ನಿರೀಕ್ಷಕನಾಗಿ ಕರ್ತವ್ಯ ನಿರ್ವಹಿಸಿರುತ್ತೇನೆ.

ದಿ: 20-02-2021 ರಂದು ಕುಂದಾಪುರ ವೃತ್ತ ನಿರೀಕ್ಷಕರ ಕೋರಿಕೆ ಮೇರೆಗೆ ಅದೇ ದಿನ ಸಂಜೆ 4-30 ಗಂಟೆ ಸಮಯದಲ್ಲಿ ಕುಂದಾಪುರ ಸಂಚಾರಿ ಆರಕ್ಷಕ ಠಾಣೆಯಲ್ಲಿ ನಿಲ್ಲಿಸಿದ ಅಪಘಾತಕ್ಕೆ ಒಳಪಟ್ಟ ಕೆಎ-20-ಡಿ-7017 ಬಸ್ಸು ನ್ನು ಪರೀಕ್ಷಿಸಿದ್ದು, ಈ ಕೆಳಕಂಡ ಜಖಂಗಳು ಕಂಡು ಬಂದಿರುತ್ತದೆ.

1. ಮುಂಭಾಗದ ಬಂಪರ್ ನ ಬಲಬದಿ, ರೇಡಿಂಹೋಟರ್ ಗ್ರಿಲ್ ನ ಬಲ ಬದಿ, ರೇಡಿಯೇಟರ್ ನ ಬಲ ಬದಿ, ಮುಂಭಾಗದ ಬಲಬದಿಯ ಫಾಗ್ ಲ್ಯಾಂಪ್ ಮತ್ತು ಪ್ರಥಮ ಕ್ರಾಸ್ ಮೆಂಬರ್ ನ ಬಲಭಾಗ ಜಖಂಗೊಂಡಿರುತ್ತದೆ. ಉಳಿದ ಭಾಗಗಳು ಸುಸ್ಥಿತಿಯಲ್ಲಿ ಇದ್ದವು.

2ನೇ ವಾಹನ ಸಂಖ್ಯೆ ಕೆಎ-20-ಇಬಿ-9759 ದ್ವಿ ಚಕ್ರವಾಹನವನ್ನು ಪರಿಶೀಲಿಸಲಾಗಿ ಈ ಕೆಳಕಂಡ ಜಖಂಗಳು ಕಂಡು ಬಂದಿರುತ್ತದೆ.

1. ಮುಂಭಾಗದ ಶೋ ಸಂಪೂರ್ಣ ಜಖಂ ಗೊಂಡಿರುತ್ತದೆ. ಮುಂಭಾಗದ ಮಡ್ ಗಾರ್ಡ್, ಹೆಡ್ ಲೈಟ್ ಯುನಿಟ್, ಮುಂಭಾಗದ ಚಕ್ರ, ಚಾಸೀಯಾ ಮುಂಭಾಗ, ಮುಂಭಾಗದ ಪೋರ್ತ್, ಡಯಲ್ ಗೇಜ್, ಬ್ರೇಕ್ ಪೆಡೆಲ್, ಗೇರ್ ಲಿವರ್, ಕ್ಲಚ್ ಲಿವರ್, ಸ್ಟೇಮ್, ಬಲಭಾಗದ ಹಿನ್ನೋಟ ಕನ್ನಡಿ, ಮುಂಭಾಗದ 2 ಬದಿಯ ಇಂಡಿಕೇಟರ್ ಗಳು, ಕ್ರ್ಯಾಷ್ ಗಾರ್ಡ್, ಎಡಭಾಗದ ಎರಡೂ ಪೂಟ್ ರೆಸ್ಟ್ ಗಳು, ಮುಂಭಾಗದ ಮತ್ತು ಹಿಂಭಾಗದ ನೋಂದಣಿ ಸಂಖ್ಯೆ ಫಲಕಗಳು, ಹಿಂಭಾಗದ ಎರಡೂ ಬದಿಯ ಇಂಡಿಕೇಟರುಗಳು, ಹಿಂಭಾಗದ ಚಕ್ರದ ಡಿಸ್ಕ್ ಗಳು ಜಖಂಗೊಂಡಿರುತ್ತದೆ. ಎಡಬದಿಯ ಹಿನ್ನೋಟ ಕನ್ನಡಿ ವಾಹನದಲ್ಲಿ ಕಂಡು ಬಂದಿರಲಿಲ್ಲ. ಇತರೆ ಭಾಗಗಳು ಸುಸ್ಥಿತಿಯಲ್ಲಿ ಇದ್ದವು. ಎರಡೂ ವಾಹನಗಳ ತಡೆಯು ಸುಸ್ಥಿತಿಯಲ್ಲಿ ಇತ್ತು. ನನ್ನ ಅಭಿಪ್ರಾಯದ ಪ್ರಕಾರ ಸದ್ರಿ ಅಪಘಾತವು ಯಾವುದೇ ತಾಂತ್ರಿಕ ದೋಷದಿಂದ ಆಗಿರುವುದಿಲ್ಲ ಎಂಬ ಬಗ್ಗೆ ವರದಿಯನ್ನು ನೀಡಿರುತ್ತೇನೆ.

ಸಾಕ್ಷಿ ಸದ್ರಿ ವರದಿಯನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ-19 ಎಂದು, ಸಾಕ್ಷಿಯ ಸಹಿಯನ್ನು ನಿಪಿ-19(ಎ) ಎಂದು ಗುರುತಿಸಲಾಯಿತು. ಸಾಕ್ಷಿ ನಿಪಿ-8 ಮತ್ತು 9 ರಲ್ಲಿ ವಾಹನಗಳನ್ನು ನೋಡಿ ಗುರುತಿಸಿರುತ್ತಾರೆ.

<u>ಪಾಟೀ ಸವಾಲುಃ ಆರೋಪಿತರ ಪರ ವಕೀಲರಾದ ಶ್ರೀ ಎಂ ಡಿ ಎಸ್    ರವರಿಂದಃ</u>

ದ್ವಿ ಚಕ್ರ ವಾಹನದ ಸವಾರನು ಅತೀ ವೇಗವಾಗಿ ಬಂದು ಬಸ್ಸಿಗೆ ಡಿಕ್ಕಿ ಹೊಡೆದು ರಸ್ತೆಗೆ ಬಿದ್ದಾಗ ಮೇಲೆ ಗುರುತಿಸಿದ ಜಖಂಗಳು ವಾಹನಗಳಿಗೆ ಸಂಭವಿಸುವ ಸಾಧ್ಯತೆ ಇರಬಹುದು. ನಿರ್ಧಿಷ್ಟವಾಗಿ ಯಾವ ಸಮಯಕ್ಕೆ ಸದ್ರಿ ಜಖಂಗಳು ಸಂಭವಿಸಿದೆ ಎಂದು ಹೇಳಬಹುದು. ಸಣ್ಣಪುಟ್ಟ ಜಖಂಗಳು ಯಾವಾಗಲಾದರೂ ವಾಹನಕ್ಕೆ ಸಂಬಂಧಿಸಿ ಆಗಿದ್ದರೆ ಅದನ್ನು ಸಾಮಾನ್ಯವಾಗಿ ರಿಪೇರಿ ಮಾಡುವುದಿಲ್ಲ ಎಂದರೆ ಸರಿಯಲ್ಲ.

ಮೇಲೆ ಹೇಳಿದ ದಿನದಂದು ಎರಡೂ ವಾಹನಗಳನ್ನು ಪರಿಶೀಲಿಸದೆ ವೃತ್ತ ನಿರೀಕ್ಷಕರ ಕೋರಿಕೆ ಮೇರೆಗೆ ವರದಿಯನ್ನು ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ.

**<u>ಮರು ವಿಚಾರಣೆಃ ಇಲ್ಲ.</u>**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓದಿ ಹೇಳಿ ಕೇಳಿ ಸರಿ ಇದೆ

**ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು**
**ಪ್ರ. ದ. ನ್ಯಾ. ದಂ. ಕುಂದಾಪುರ**